ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	608 (646)
ಸದಸ್ಯರ ಹೆಸರು:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ಸಚಿವರು	ಮಾನ್ಯ ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ:	11-03-2020

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ತಹಶೀಲ್ದಾರ ಹಾಗೂ ಉಪತಹಶೀಲ್ದಾರರ ಹುದ್ದೆಗಳ ಸಂಖ್ಯೆ ಎಷ್ಟು;	ಕಂದಾಯ ಇಲಾಖೆಯಲ್ಲಿ ಒಟ್ಟು 246 ತಹಶೀಲ್ದಾರ ಹಾಗೂ 86 ಉಪತಹಶೀಲ್ದಾರರ ಹುದ್ದೆಗಳು ಖಾಲಿ ಇರುತ್ತವೆ.
ಆ)	ಇವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು	ಖಾಲಿ ಇರುವ ತಹಶೀಲ್ದಾರ್ ಗ್ರೇಡ್-2 ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ 2015 ನೇ ಸಾಲಿನಲ್ಲಿ ಲೋಕಸೇವಾ ಆಯೋಗದಿಂದ 66 ಹುದ್ದೆಗಳಿಗೆ ಸಂಬಂಧಿಸಿದಂತೆ ಅಂತಿಮ ಪಟ್ಟಿ ಸ್ವೀಕೃತಗೊಂಡಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ ಹಾಗೂ 2017-18ನೇ ಸಾಲಿಗೆ ದಿನಾಂಕ: 19-01-2019 ರ ಪತ್ರ ಸಂಖ್ಯೆ: ಸಿಆಸುಇ 110 ಸೇಲೋಸೇ 2017 ರಲ್ಲಿ 50 ಹುದ್ದೆಗಳನ್ನು ನೇಮಕಾತಿಗಾಗಿ ಆಯ್ಕೆ ಪ್ರಕ್ರಿಯನ್ನು ಜರುಗಿಸಲು ಲೋಕಸೇವಾ ಆಯೋಗವನ್ನು ಕೋರಲಾಗಿರುತ್ತದೆ. ಉಪ ತಹಶೀಲ್ದಾರ್ / ಶಿರಸ್ತೇದಾರ್ ವೃಂದದ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರು / ರಾಜಸ್ವ ನಿರೀಕ್ಷಕರು / ಶೀಘ್ರಲಿಪಿಗಾರರ ಹುದ್ದೆಗಳಿಂದ ಶೇ. 100 ರಷ್ಟು ಮುಂಬಡ್ತಿ ನೀಡುವ ಕ್ರಮವನ್ನು ಸಕ್ಷಮ ಪ್ರಾಧಿಕಾರವಾದ ಆಯಾ ಪ್ರಾದೇಶಿಕ ಆಯುಕ್ತರುಗಳು ಕ್ರಮವಹಿಸುತ್ತಾರೆ.
ಇ)	ಯಾವ ಕಾಲಮಿತಿಯಲ್ಲಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.	
ಈ)	ತಹಶೀಲ್ದಾರ್ ಕಛೇರಿಗಳಲ್ಲಿ ಆರ್.ಆರ್.ಟಿ. ವಿಭಾಗದಲ್ಲಿ ತಕರಾರುಗಳ ವಿಲೇವಾರಿ ವಿಳಂಬ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಬಂದಿದೆ
ಉ)	ಹಾಗಾದಲ್ಲಿ ಸುಧಾರಣೆಗೆ ಯಾವ ಕ್ರಮ ರೂಪಿಸಲಾಗಿದೆ? (ವಿವರ ನೀಡುವುದು)	ಆರ್.ಆರ್.ಟಿ. ವಿಭಾಗದಲ್ಲಿ ತಕರಾರುಗಳ ವಿಲೇವಾರಿ ವಿಳಂಬ ಉಂಟಾಗುತ್ತಿರುವುದನ್ನು ಸುಧಾರಣೆ ಮಾಡಲು ಕೈಗೊಳ್ಳುತ್ತಿರುವ ಕ್ರಮಗಳ ಪ್ರಾದೇಶಿಕವಾರು ವಿಭಾಗದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂ: ಕಂಇ 15 ಎಎಸ್‌ಡಿ 2020

(ಆರ್. ಅಶೋಕ)
ಕಂದಾಯ ಸಚಿವರು.

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) ಇವರು ಕೋರಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 608 (646)ರ ಅನುಬಂಧ

ಬೆಂಗಳೂರು ವಿಭಾಗ:

ಸರ್ಕಾರದ ಆದೇಶ ಸಂಖ್ಯೆ: ಕಂಇ 141 ಟಿಆರ್‌ಎಂ 2019, ದಿನಾಂಕ: 16-7-2019 ರಂತೆ ವಿವಾದಾಸ್ಪದ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ತಹಶೀಲ್ದಾರ್ ಗ್ರೇಡ್-1 ರವರು ತಾಲ್ಲೂಕಿನ ಕಸಬಾ ಹೋಬಳಿ ಪ್ರಕರಣಗಳನ್ನು ತಹಶೀಲ್ದಾರ್ ಗ್ರೇಡ್-2 ರವರು ಬಾಕಿ ಹೋಬಳಿಗಳ ಪ್ರಕರಣಗಳನ್ನು ಮತ್ತು ವಿಶೇಷ ತಹಶೀಲ್ದಾರ್ ರವರುಗಳು ಇರುವಂತಹ ಜಿಲ್ಲೆಗಳಲ್ಲಿ ವಿಶೇಷ ತಹಶೀಲ್ದಾರ್ ರವರೇ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಆದೇಶಿಸಲಾಗಿರುತ್ತದೆ. ಅದರಂತೆ ಪ್ರಕರಣಗಳ ಶೀಘ್ರವಿಲೇವಾರಿಯ ಬಗ್ಗೆ ಕ್ರಮವಹಿಸಲಾಗುತ್ತಿದೆ.

ಮೈಸೂರು ವಿಭಾಗ:

ಮೈಸೂರು ಜಿಲ್ಲೆಯಲ್ಲಿ ತಹಶೀಲ್ದಾರ್ ಗ್ರೇಡ್-1 ರವರು ನಡೆಸುತ್ತಿದ್ದ ತಕರಾರು ಪ್ರಕರಣಗಳ ವಿಚಾರಣೆಯನ್ನು ಸರ್ಕಾರದ ಸೂಚನೆಯಂತೆ ಹಾಲಿ ತಹಶೀಲ್ದಾರ್ ಗ್ರೇಡ್-2 ರವರು ನಡೆಸುತ್ತಿರುತ್ತಾರೆ. ಪ್ರತಿ ವಾರ ಆಯುಕ್ತರು, ಭೂಮಾಪನ ಮತ್ತು ಪದನಿಮಿತ್ತ ನಿರ್ದೇಶಕರು ಭೂಮಿ ಮತ್ತು ಯುಪಿಓಆರ್ ರವರ ಅಧ್ಯಕ್ಷತೆಯಲ್ಲಿ ನಡೆಯುವ ವೀಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ತಕರಾರು ಪ್ರಕರಣಗಳ ವಿಲೇವಾರಿ ಬಗ್ಗೆ ಪ್ರಗತಿ ಪರಿಶೀಲನೆ ನಡೆಸಲಾಗುತ್ತಿದೆ. ಅದೇ ರೀತಿ ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳ ಮಟ್ಟದಲ್ಲಿಯೂ ಸಹ ಪ್ರಗತಿ ಪರಿಶೀಲನೆ ಮಾಡಿ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಕ್ರಮವಹಿಸಲಾಗುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿ ಆರ್‌ಆರ್‌ಟಿ ಶಾಖೆಯಲ್ಲಿ ಬಾಕಿ ಇರುವ ತಕರಾರು ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆ ಮಾಡಿ ವಿಲೇವಾರಿ ಮಾಡುವಂತೆ ತಹಶೀಲ್ದಾರ್‌ಗಳಿಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಸೂಚನೆಗಳನ್ನು ನೀಡಲಾಗುತ್ತಿದೆ.

ಉಡುಪಿ ಜಿಲ್ಲೆಯಲ್ಲಿ ತಹಶೀಲ್ದಾರ್ ಕಚೇರಿಗಳಲ್ಲಿ ಆರ್.ಆರ್.ಟಿ. ತಕರಾರು ಸಂಬಂಧಿಸಿ ಸಾರ್ವಜನಿಕರಿಂದ ಪಹಣಿ ವಿಸ್ತೀರ್ಣ ಹೆಸರು ತಿದ್ದುಪಡಿ ಕಲಂ 11 ಹಂಚು ಭಾವಣೆ, ಪೈಕಿ ತಿದ್ದುಪಡಿ ಕೋರಿ ಬಂದ ಅರ್ಜಿಗಳ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಕಂದಾಯ ಆದಾಲತ್ ಆಂದೋಲನದ ಮೂಲಕ ಪಹಣಿ ತಿದ್ದುಪಡಿಗೆ ಕ್ರಮ ವಹಿಸಲಾಗುತ್ತಿದೆ ಹಾಗೂ ತಿದ್ದುಪಡಿ ತಂತ್ರಾಂಶದ ಮೂಲಕ ದಾಖಲಿಸಿ ಉಪವಿಭಾಗಾಧಿಕಾರಿಯವರ ಅನುಮೋದನೆ ಪಡೆದು ವಿಲೇಗೊಳಿಸಲಾಗುತ್ತಿದೆ. ಈವರೆಗೆ ಒಟ್ಟು 1636 ಕಂದಾಯ ಆದಾಲತ್‌ಗಳಲ್ಲಿ 44,474 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ. ಖಾತಾ ಬದಲಾವಣೆಗೆ ಆಕ್ಷೇಪಣೆ ಸಂಬಂಧಿಸಿ ಡಿ.ಎಮ್.ಆರ್. ಅಥವಾ ದಸ್ತಾವೇಜಿನಂತೆ ಖಾತಾ ಬದಲಾವಣೆ ಮತ್ತಿತರ ಪ್ರಕರಣಗಳ ಬಗ್ಗೆ ತಹಶೀಲ್ದಾರ್ ನ್ಯಾಯಾಲಯದಲ್ಲಿ ಸೂಕ್ತ ಆದೇಶವನ್ನು ಹೊರಡಿಸಿ RCCMA ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದೆ. ಇದರಿಂದ ಆದೇಶದಿಂದ ಬಾಧಿತರಾದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ 1964 ರಡಿ ಮೇಲ್ಮನವಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಪಹಣಿ ಕಲಂ 3 & 9 ವ್ಯತ್ಯಾಸ ಇರುವ ಆರ್.ಆರ್.ಟಿ. ಪ್ರಕರಣಗಳಲ್ಲಿ ಹಾಗೂ ಆಕಾರ್ ಬಂದ್ ಮತ್ತು ಪಹಣಿ ವಿಸ್ತೀರ್ಣ ತಾಳೆಯಿಲ್ಲದ ಪ್ರಕರಣಗಳ ಬಗ್ಗೆ ಆದ್ಯತೆಯ ಮೇಲೆ ಗುರಿ ನಿಗಧಿಪಡಿಸಿ ತಹಶೀಲ್ದಾರರು ಸಂಬಂಧಿತರಿಗೆ ನೋಟಿಸು ನೀಡಿ ಪ್ರಕರಣಗಳ ತುರ್ತು ವಿಲೇವಾರಿಗೆ ಕ್ರಮವಹಿಸುವುದು

<u>ಬೆಳಗಾವಿ ವಿಭಾಗ:</u>

ಸರ್ಕಾರದ ಆದೇಶ ಸಂಖ್ಯೆ.ಕಂಇ 141 ಟಿಆರ್‌ಎಮ್ 2019 ದಿನಾಂಕ:16-07-2019 ರಲ್ಲಿ ವಿವಾದಸ್ಪದ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ನೀಡಲಾದ ಸೂಚನೆಗಳನ್ವಯ ಕ್ರಮ ವಹಿಸಲಾಗಿದೆ.

<u>ಕಲಬುರಗಿ ವಿಭಾಗ:</u>

ಆರ್.ಆರ್.ಟಿ. ಪ್ರಕರಣಗಳನ್ನು ಉಪತಹಶೀಲ್ದಾರರಿಗೆ ನಿರ್ವಹಿಸಲು ಪ್ರತ್ಯಾಯೋಜಿಸಲಾದ ಅಧಿಕಾರವನ್ನು ಹಿಂಪಡೆದು ತಹಶೀಲ್ದಾರರಿಗೆ ವಹಿಸಲಾಗಿರುತ್ತದೆ ಮತ್ತು ಆರ್.ಆರ್.ಟಿ. ಪ್ರಕರಣಗಳನ್ನು (ಆರ್.ಸಿ.ಸಿ.ಎಂ.ಎಸ್) ತಂತ್ರಾಂಶದಲ್ಲಿ ನಿರ್ವಹಿಸಲು ವ್ಯವಸ್ಥೆ ಮಾಡಲಾಗಿದೆ.

*****